ಕಥೆ, ಕಾದಂಬರಿ, ಅಂಕಣಗಳ ಮೂಲಕ ಪ್ರಸಿದ್ಧರಾದ ಪ್ರೇಮಶೇಖರ, ಭಾರತದ ವಿದೇಶಾಂಗ ನೀತಿ ಕಲಿಸುತ್ತಿದ್ದ ಬೋಧಕರೂ ಹೌದು. ಈಗ ನಿವೃತ್ತರು. ಉಡುಪಿ ವಾಸಿ. 'ಅಡವಿಯ ಹುಡುಗಿ', 'ಬೊಳ್ಳೊಣಕಯ್ಯ', 'ಗತ ಗತಿ', 'ಪ್ರವಾದಿಯ ಶಾಪ' 'ಯುದ್ಧ', 'ಖೆಡ್ಡಾ', 'ಮೊದ್ದು ಮಣಿ', 'ಅಲೆಮಾರಿಯ ಕಥೆಗಳು', 'ಚಂಡಮಾರುತ' ಹಾಗೂ 'ಬೆಂಗಳೂರು ಮಾಫಿಯಾ' ಅವರ ಕೆಲವು ಪ್ರಸಿದ್ಧ ಕೃತಿಗಳು.

ಎರಡು ಬಾಚಿಹಲ್ಲುಗಳನ್ನು ಮಾಡಿ ಅವುಗಳನ್ನು ನಯಗೊಳಿಸುತ್ತಿದ್ದಳು. ಬೆಳ್ಳನ್ನ ಬಿಳೀ ಬಣ್ಣದ ಅವು ಅಕರ್ಷಕವಾಗಿದ್ದವು, ಹೊಳಪಾಗಿದ್ದವು. ಅವುಗಳತ್ತ ನೋಡಿ ಮೋಡಿಗೊಳಗಾದವನಂತೆ ಸಣ್ಣಗೆ ನಗೆಯರಳಿಸಿದೆ.

ಆಗೊಮ್ಮೆ ಗಾಳಿ ಬೀಸಿತು. ಮಕ್ಕಳು ಮಾಡಿದ್ದ ಜೇಡಿಮಣ್ಣಿನ ಹಲ್ಲುಗಳು ತರಗೆಲೆಗಳಂತೆ ಮೇಲೆ ಹಾರಿದವು. ಅವುಗಳನ್ನು ಹಿಡಿಯಲು ಹೋದ ಮಕ್ಕಳು ತಗ್ಗಿನಿಂದ ಮೇಲೆ ಹಾರಿ ದಿಕ್ಕುದಿಕ್ಕುಗಳಲ್ಲಿ ಚದುರಿಹೋಗಿ ಕಾಣೆಯಾದರು. ಮುದುಕಿ ಮಾತ್ರ ಕಲ್ಲಿನಲ್ಲಿ ಕಟೆದ ಪುರಾತನ ವಿಗ್ರಹದಂತೆ ನನ್ನನ್ನೇ ನೋಡುತ್ತಾ ಕುಳಿತಿದ್ದಳು. ಎಷ್ಟು ಹೊತ್ತಾದರೂ ಅವಳ ಕಣ್ಣುಗಳು ಮುಚ್ಚಲೇ ಇಲ್ಲ. ಅವು ಏನು ಹೇಳುತ್ತಿವೆ? ಕೇಳಿಯೇಬಿಟ್ಟೆ.

ವಿಗ್ರಹದ ತುಟಿಗಳು ಮೆಲ್ಲನೆ ಅಲುಗಿದವು. ಬೆಣಚುಕಲ್ಲುಗಳು ಒಂದನ್ನೊಂದು ಉಜ್ಜಿ ಹೊರಡಿಸುವ ಶಬ್ದದಂತೆ ಮಾತುಗಳು ಹೊರಟವು: "ನೀ ಹುಡುಕಿ ನಡೆದದ್ದೆಂದೂ ನಿನ್ನದಾಗದು. ನೀ ನಿಂತರೆ ನಿನ್ನ ಸುತ್ತಲೂ ಮೊಳೆತು ಬೆಳೆಯುವಂತಹವುಗಳು ಮಾತ್ರ ನಿನ್ನದಾಗುತ್ತವೆ. ಅವುಗಳನ್ನು ಒಪ್ಪಿಕೋ, ಅವುಗಳಲ್ಲಿ ಒಂದಾಗು. ನಿನ್ನೆಲ್ಲಾ ಪೂರ್ವಜನ್ಮಗಳಲ್ಲಿ ನೀನು ಸೇರಿಸಿಟ್ಟುಕೊಂಡ ಬೀಜಗಳಿಂದ ಹೊರಡುತ್ತಿರುವ ಸಸಿಗಳು ಅವು."

ಅಷ್ಟು ಹೇಳಿ ಮುದುಕಿಯ ವಿಗ್ರಹ ಮೆಲ್ಲಮೆಲ್ಲನೆ ಭೂಮಿಗಿಳಿದು ಮರೆಯಾಗಿಹೋಯಿತು.

ಕಣ್ಣೆದುರಿಗೇ ಘಟಿಸಿದ ಕೌತುಕ ನನ್ನನ್ನು ದಿಙ್ಮೂಢನನ್ನಾಗಿಸಿಬಿಟ್ಟಿತು. ಸುತ್ತಲೂ ಬೆರಗಿನ ನೋಟ ಹೊರಳಾಡಿಸಿದೆ.

ನೂರು-ನೂರಿಪ್ಪತ್ತು ಅಡಿಗಳಷ್ಟು ಅಗಲದ, ಇಪ್ಪತ್ತೈದು-ಮೂವತ್ತು ಅಡಿಗಳಷ್ಟು ಅಗಲದ, ಹತ್ತು-ಹನ್ನೆರಡು ಅಡಿಗಳಷ್ಟು ಆಳದ ಆ ತಗ್ಗೊಂದು ದೋಣಿಯಂತೆ ಕಂಡಿತು. ಅದೀಗ ನಿರ್ಜೀವ, ನೀರವ.

ಅದರಾಚೆಗೆ ಜಗತ್ತೇನಾದರೂ ಇದೆಯೇ ಅಥವಾ ಏನೂ ಇಲ್ಲವೇ? ನನಗೆ ಅನುಮಾನದ ಜತೆಗೆ ಆತಂಕ. ಒಮ್ಮೆ ಬಲವಾಗಿ ತಲೆ ಒದರಿ ಬಂದ ದಾರಿಯತ್ತ ನೋಡಿದರೆ ಅದು ಕಾಣೆಯಾಗಿತ್ತು. ಗಕ್ಕನೆ ಮುಂದೆ ತಿರುಗಿದೆ. ಅಲ್ಲಿ ದಾರಿ ಇತ್ತು, ತಗ್ಗಿನಿಂದ ಮೇಲೆ ಕರೆದೊಯ್ಯುವಷ್ಟು ಸ್ಪಷ್ಟವಾಗಿತ್ತು. ತಡ ಮಾಡಿದರೆ ಅದೂ ಕಾಣದಾಗಬಹುದೆಂದು ಶಂಕಿಸಿ ಉಸಿರು ಕಟ್ಟಿಹೋಗುವಷ್ಟು ವೇಗವಾಗಿ ಓಡಿ ಮೇಲೇರಿದೆ. ದೋಣಿ ತಗ್ಗಿಗೆ ಬೆನ್ನು ಹಾಕಿ ವೇಗವಾಗಿ ನಡೆಯುತ್ತಾ ಹೋದೆ. ಎಳೆಬಿಸಿಲು ಹಿತವಾಗಿತ್ತು. ಅದು ಚುರುಗುಟ್ಟುವ ಹೊತ್ತಿಗೆ ಮೂರು ದಾರಿಗಳು ಸಿಕ್ಕಿದವು. ಮೂರಕ್ಕೂ ಒಂದೊಂದು ಕೈಮರ, ಮೂರರಲ್ಲೂ ಒಂದೊಂದು ಮರ.

ಮೊದಲನೆಯ ಕೈಮರದಲ್ಲಿ "ಸಂಕೋಲೆ" ಎಂದಿತ್ತು, ಮರದ ಕಾಂಡಕ್ಕೆ ಉದ್ದನೆಯ ಸರ್ಪವೊಂದು ಸುತ್ತಿಕೊಂಡಿತ್ತು. ಎರಡನೆಯ ಕೈಮರ "ಗದ್ದಲ" ಎಂದು ಬರೆದುಕೊಂಡಿತ್ತು. ಅಲ್ಲಿದ್ದ ಮರದ ಕೆಳಗೆ ಗುಂಡುಗುಂಡನೆಯ ನಾಯಿಯೊಂದು ಮಲಗಿತ್ತು. ಮೂರನೆಯ ಕೈಮರ "ಕಾಟ" ಎಂದು ಕೊರೆದುಕೊಂಡಿತ್ತು. ಮರದ ಉದ್ದನೆಯ ಕೊಂಬೆಗೆ ಬಾಲ ಸುತ್ತಿಕೊಂಡು ಒಂದು ಬೇತಾಳ ನೇತಾಡುತ್ತಿತ್ತು.

ನನಗೆ ಅಚ್ಚರಿ. ಮೂರನ್ನೂ ದೂರದಲ್ಲೇ ನಿಂತು ಅವಲೋಕಿಸಿದೆ. ಮೂರು ದಾರಿಗಳೂ ಮುಂದೆ ಅನತಿ ದೂರದಲ್ಲಿ ಮತ್ತೆ ಒಂದಾಗಿದ್ದವು. ಅಗಲವಾಗಿದ್ದ ಆ ದಾರಿ ಬೆಟ್ಟದ ನೆತ್ತಿಗೆ ಏರಿಹೋಗಿತ್ತು. ಅಲ್ಲಿ ಅದು ಕೆಳಗಿಳಿದಿರಬೇಕು, ಮುಂದಿನದು ಕಾಣುತ್ತಿರಲಿಲ್ಲ. ಆ ದಾರಿ ಅನೂಹ್ಯ.

ಆದರೆ, ಅದು ನನ್ನ ದಾರಿ. ಇಲ್ಲಿಯವರೆಗೆ ನಡೆದುಬಂದ ದಾರಿ ನನ್ನನ್ನು ಕರೆದೊಯ್ಯುವುದು ಅಲ್ಲಿಗೇ. ನಾನಲ್ಲಿಗೆ ಹೋಗಬೇಕು, ಆ ದಾರಿ ಹಿಡಿದು